

# ಬಿದ್ರೂಫಿ ಲಗೋರಿ

■ ಸುಮಾ ರಮೇಶ್
ಕಲೆ: ಭಾಸ್ಕರ್

ದೂರದೂರಿಗೆ ಪ್ರವಾಸ ಹೊರಟಿದ್ದ ನಾವು ಆಧುನಿಕತೆಗೆ ಇನ್ನೂ ಅಷ್ಟಾಗಿ ತೆರೆದುಕೊಳ್ಳದ ಗ್ರಾಮವೊಂದನ್ನು ಹಾದು ಹೋಗುತ್ತಾ ಅಲ್ಲಿನ ಭೌಗೋಳಿಕ ದೃಶ್ಯಾವಳಿಯನ್ನು ಕಣ್ತುಂಬಿಕೊಳ್ಳುತ್ತಿದ್ದೆವು. ಇಕ್ಕಟ್ಟಾದ ಮಣ್ಣಿನ ರಸ್ತೆಗಳ ನಡುವೆ ಯಾವುದೇ ಕ್ರಾಸ್ ಬ್ರೀಡಿಂಗ್ ಪ್ರಕ್ರಿಯೆಗೆ ಸಿಲುಕದ ನಾಟಿ ನಾಯಿಗಳು, ಪೌಲ್ಟ್ರಿ ಫಾರ್ಮ್ ಮುಖ ಕಾಣದ ಕೋಳಿ, ಹೇಂಟೆಗಳು ಸ್ವಚ್ಛಂದವಾಗಿ ಅಡ್ಡಾಡುತ್ತಾ ತಮ್ಮ ಅನ್ ಅಡಲ್ಟ್ರೇಟೆಡ್ ಮ್ಯಾನರಿಸಮ್ ಮೆರೆಯುತ್ತಿದ್ದವು. ದಾರಿಗಡ್ಡ ಬಂದ ನಾಟಿ ಹಸು, ಎಮ್ಮೆಗಳು ಕಾರಿನ ಹಾರ್ನ್ ಸದ್ದಿಗೆ ಕ್ಯಾರೇ ಎನ್ನದೆ 'ಬೇಕಾದ್ರೆ ನೀವೇ ಸೈಡಲ್ಲಿ ಹೋಗ್ರಿ' ಎಂಬ ಭಾವದಲ್ಲಿ ನಿಂತಿದ್ದವು. ಅವುಗಳ ಸಗಣಿಯ ಮೇಲೆ ಬೆರಳಚ್ಚಿನ ಮೊಹರು ಪಡೆದ ಬೆರಣಿಗಳು ಚಿಕ್ಕ ಚಿಕ್ಕ ನಾಡ ಹಂಚಿನ ಮನೆಯ ಗೋಡೆಗಳಿಗೆ ವಾಲ್ ಟೈಲ್ಸ್‌ನಂತೆ ಮೆತ್ತಿಕೊಂಡಿದ್ದವು. ವಸ್ತ್ರ ಸಂಹಿತೆಯ ಗೊಡವೆಯಿಲ್ಲದೆ ಹಿರಿಯಕ್ಕ ಅಣ್ಣಂದಿರ ದೊಗಲೆ ಅಂಗಿ ಧರಿಸಿ ಅಂಗಳಕ್ಕಿಳಿದಿದ್ದ ಮಕ್ಕಳು ಜಗದ ಆನಂದವನ್ನೆಲ್ಲಾ ಸೂರೆಗೊಂಡಂತೆ ಪುಟಿದೇಳುತ್ತಿದ್ದರು. ಒಂದೆಡೆ ಏಳೆಂಟು ತೆಳುವಾದ ಕಲ್ಲಿನ ಗೋಪುರ ಕಟ್ಟಿದ್ದ ಆಟಗಾರರ ತಂಡ 'ಬಿದ್ರೂಫಿ ಲಗೋರಿ' ಎಂದರಚಿದಾಗ ಅದಾಗಲೇ ನೆನಪಿನ ದಾಸ್ತಾನಿನಲ್ಲಿ ಹುದುಗಿಹೋಗಿದ್ದ ಬಾಲ್ಯದ ಮಧುರ ನೆನಪಿನ ಎಳೆಯೊಂದು ಥಳ್ಳನೆ ಹೊರಬಂದು ಮೈಯೆಲ್ಲಾ ವ್ಯಾಪಿಸಿ ರೋಮಾಂಚಿತಳಾದೆ. ಕಾರು ಮುಂದೆ ಸಾಗಿದಂತೆ ಮನಸ್ಸು ಹಿಮ್ಮುಖ ಚಲನೆಗೆ ಅನುವಾಯಿತು.

ಬಾಲ್ಯದಲ್ಲಿ ನಮ್ಮಂತಹ ಚಿಣ್ಣರಿಗೆ ನಿತ್ಯ ಶಾಲೆ ಮುಗಿಸಿ ಬಂದ ನಂತರ ಮನೆಯೊಳಗಿರುವುದು ಪಥ್ಯವಾಗುತ್ತಿರಲಿಲ್ಲ. ಅದರಲ್ಲೂ ಬೇಸಿಗೆ ರಜದಲ್ಲಿ ಮನೆಯಲ್ಲಿ ಖಾಲಿ ಕೂರುವುದು ರೇಜಿಗೆ ಹುಟ್ಟಿಸುತ್ತಿತ್ತು. ಹಿರಿಯರೆದುರು ಸುಮ್ಮನೆ ಅಡ್ಡಾಡಿದರೆ ಸಾಕು ಮಗ್ಗಿ ಹೇಳು ಎಂದೋ, ಎಣ್ಣೆ ನೀರು ಎಂದೋ ಲಾಕ್ ಮಾಡಿಬಿಡುತ್ತಿದ್ದರು. ಇದರಿಂದ ಬಚಾವಾಗಲು ಮುಂಜಾನೆ ಬೇಗನೆದ್ದು ಒಂದಿಷ್ಟು ಹೊಟ್ಟೆಗ್ಹಾಕಿಕೊಂಡು ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ನಮ್ಮ ಕಾಗೆ ಬಳಗದೊಂದಿಗೆ ಹೊರನಡೆದು ಚಿಲಿಪಿಲಿಗುಟ್ಟುತ್ತಾ ಸೂರ್ಯೋದಯಕ್ಕೆ ಇನ್ನಷ್ಟು ಜೀವ ತುಂಬುತ್ತಿದ್ದೆವು. ಊಟ ನಿದ್ರೆ ಬಿಟ್ಟು ಬೇಸರವಿಲ್ಲದಂತೆ ಗೆಳೆಯರ ಬಳಗದೊಂದಿಗೆ ಅಂಡಲೆಯುತ್ತಾ ಕಾಲ ಕಳೆಯುತ್ತಿದ್ದೆವು. ಆಟದ ಮೇಲಿನ ಆಸಕ್ತಿ ನಮ್ಮ ಹೊಟ್ಟೆಬಾಕತನವನ್ನೂ ಓವರ್ ಟೇಕ್ ಮಾಡಿಬಿಡುತ್ತಿತ್ತು. ಮರಕೋತಿ, ಗೋಲಿ, ಗಿಲ್ಲಿ ದಾಂಡು, ಕಬಡ್ಡಿ, ಬುಗುರಿ, ಲಗೋರಿ, ಕುಂಟೋಬಿಲ್ಲೆ ಹೀಗೆ... ಅತ್ಯಲ್ಪ ಪರಿಕರದಲ್ಲಿ, ಇಲ್ಲವೇ ಯಾವುದೇ ಪರಿಕರಗಳಿಲ್ಲದೆಯೂ ಆಡುವ ಕಲೆ ನಮಗೆ ಸಿದ್ಧಿಸಿತ್ತು. ಜೊತೆಗೊಂದು ರಬ್ಬರಿನ ಬಾಲು ದೊರೆತರೆ ಕುಶಾಲು ಹೆಚ್ಚಿ ನಮ್ಮ ಅಬ್ಬರಕ್ಕೆ ಇನ್ನಷ್ಟು ಚೈತನ್ಯ ಆವಾಹನೆಯಾಗುತ್ತಿತ್ತು. ಕ್ಯಾಚ್ ಕ್ಯಾಚ್, ರಾಮ್ ಚಂಡ್ ಭೀಮ್ ಚಂಡ್, ಲಗೋರಿ, ಕ್ರಿಕೆಟ್ ಹೀಗೆ ಏಕಮೇವ ಚೆಂಡು ಹಲವು ಕ್ರೀಡೆಗಳ ರೂವಾರಿಯಾಗಿ ಕೈಯಿಂದ